■ ಹನಿ

# ರಾಡಿಯಾ ರಾಡಿ!



ಹಗರಣಗಳ ರಾಡಿ ಎದ್ದಾಗಲೆಲ್ಲ ಮಹಿಳೆಯೊಬ್ಬಳ ಹೆಸರು ಕೇಳಿಬರುವುದು ಈಗ ಅಚ್ಚರಿಯೇನಲ್ಲ. ಇದೀಗ ಲೋಕಸಭೆಯಲ್ಲಿ ರಾಡಿ ಎಬ್ಬಿಸಿರುವ 2ಜಿ ತರಂಗಾಂತರಗಳ ಹಗರಣದಲ್ಲಿ ಗಟ್ಟಿಯಾಗಿ ಕೇಳಿ ಬರುತ್ತಿರುವ ಹೆಸರು ನಿರಾ ರಾಡಿಯಾಳದ್ದು. ಆಕೆಯ ಹೆಸರಿನಲ್ಲೇ 'ರಾಡಿ' ಇರೋದರಿಂದ ಇವೆಲ್ಲ ಸಹಜ ಎಂದು ಸುಮ್ಮನಿರುವಂತಿಲ್ಲ!

ಈವರೆಗೆ ಯಾರೂ ಗಟ್ಟಿಯಾಗಿ ಕೇಳಿರದೇ ಇದ್ದ ಹೆಸರು ನಿರಾಳದ್ದು. ಆದರೆ 2ಜಿ ತರಂಗಾಂತರ ವಿತರಣೆಯಲ್ಲಿ ಕೇಂದ್ರ ಸಚಿವ ಎ.ರಾಜಾ ರಾಜೀನಾಮೆ ಕೊಡುವಲ್ಲಿ ನಿರಾಳದ್ದೇ ಮುಖ್ಯ ಕೈವಾಡ ಎನ್ನುವುದು ಆರೋಪ. ಟಾಟಾ ಕಂಪೆನಿಯ ಪ್ರತಿನಿಧಿಯಾಗಿ ಸಚಿವರ ಜತೆ ವ್ಯವಹರಿಸಿದ ನಿರಾ ಈ ಒಂದೇ ವಹಿವಾಟಿನಲ್ಲಿ 60 ಕೋಟಿ ರೂಪಾಯಿ ಕನ್ಸಲ್ಟನ್ಸಿ ಫೀ ಪಡೆದಿದ್ದಾಳಂತೆ! 'ಅದು ಫೀ ಅಲ್ಲ.. ಛೀ..' ಎನ್ನುವುದು ವಿರೋಧಪಕ್ಷಗಳ ಆರೋಪ!

ನಿರಾ ಹೊಂದಿರುವ ಕಂಪೆನಿಗಳು ಒಂದೆರಡಲ್ಲ. ವಿಟ್‌ಕಾಮ್, ನ್ಯೂಕಾಮ್, ಮ್ಯಾಜಿಕ್ ಏರ್‌ಲೈನ್ಸ್, ಯೂನಿಟೆಕ್, ನೋಯಸಿಸ್ ಕನ್ಸಲ್ಟನ್ಸಿ– ಹೀಗೆ ಹತ್ತಾರು ಕಂಪೆನಿಗಳ ಒಡತಿ ಈ ನಿರಾ. ಈಕೆಯ ವೈಷ್ಣವಿ ಕಮ್ಯುನಿಕೇಷನ್ಸ್ ಟಾಟಾ ಪರವಾಗಿ ಸರಕಾರದಲ್ಲಿ ಲಾಬಿ ಮಾಡಿ ಕಾಂಟ್ರಾಕ್ಟ್ ಕೊಡಿಸಿದೆ ಎನ್ನುವುದು ಆಪಾದನೆ. ಭಾರತದ ಹಲವು ಹಿರಿಯ ಪತ್ರಕರ್ತರಿಗೆ ನಿಕಟವಾಗಿರುವ ನಿರಾ, ಬ್ರಿಟಿಶ್ ಪಾಸ್‌ಪೋರ್ಟ್ ಹೊಂದಿದವಳು. 'ಲೈಸೆನ್ಸ್ ಹಂಚಿಕೆಯಲ್ಲಿ ಟಾಟಾಗೆ ಅನ್ಯಾಯವಾಗಿತ್ತು. ನಾನು ಓಡಾಡಿ ನ್ಯಾಯ ಕೊಡಿಸಿದೆ' ಎಂಬ ಈಕೆಯ ವಾದ ಕೇಳಿ ಸಿಬಿಐ ಅಧಿಕಾರಿಗಳೂ ಸುಸ್ತಾದರಂತೆ!



# ಬಿಗ್ ಬಾಸ್!

ಬಿಗ್ ಬಾಸ್–4 ರಿಯಾಲಿಟಿ ಷೋ ಮಾಡುತ್ತಿರುವ ಸುದ್ದಿಗಳು ಒಂದೆರಡಲ್ಲ. ಮೊನ್ನೆಯಷ್ಟೇ 'ಬೇ ವಾಚ್' ಖ್ಯಾತಿಯ ಪಮೇಲಾ ಆ್ಯಂಡರ್‌ಸನ್ ಬಂದು ಹೋದಳು. ಇದೀಗ ಸಿಲ್ವೆಸ್ಟರ್ ಸ್ಟಾಲನ್ ಬರಲಿರುವ ಸುದ್ದಿ ಎದ್ದಿದೆ! ರಾಕಿ ಮತ್ತು ರ್‍ಯಾಂಬೊ ಸರಣಿ ಸಿನಿಮಾಗಳ ಖ್ಯಾತಿಯ ಈ ಹಾಲಿವುಡ್ ನಟ, ನಿರ್ದೇಶಕ, ಚಿತ್ರಕಥೆಗಾರ ಬಿಗ್‌ಬಾಸ್–4 ಗೆ ಬರಲಿರುವ ಮುಂದಿನ ಅತಿಥಿಯಂತೆ. ವಯಸ್ಸು 64 ಆದರೂ ಇನ್ನೂ ಯುವಕನಂತೆ ಕಾಣುವ ಈ ಕಟ್ಟುಮಸ್ತು ಹೀರೋನನ್ನು ಒಂದು ಕಾಲದಲ್ಲಿ ನಮ್ಮ ಬಾಲಿವುಡ್ ಕೃಷ್ಣಸುಂದರಿ ರೇಖಾ ಮದುವೆಯಾಗಬೇಕೆಂದು ಕನಸಿದ್ದಳು! ಅಷ್ಟೊಂದು ಖ್ಯಾತಿಯ ಸ್ಟಾಲನ್, ಬಿಗ್ ಬಾಸ್‌ನಲ್ಲಿ ಬಂದಾಗ ಇನ್ನೊಬ್ಬ ಡಬ್ಲ್ಯುಡಬ್ಲ್ಯುಎಫ್ ಕುಸ್ತಿ ಪಟು ಖಲೀ ಜತೆಗೆ ಹೊಡೆದಾಟ ನಡೆಯಬಹುದೆ.. ಎನ್ನುವುದು ಈಗ ಎಲ್ಲರ ಕುತೂಹಲ. ಒಡಕುಬಾಯಿಯಿಂದಾಗಿ ಬಿಗ್‌ಬಾಸ್‌ನಿಂದ ಹೊರಬಿದ್ದ ಡಾಲಿ ಬಿಂದ್ರಾ ಮತ್ತೆ ಷೋಗೆ ರಿ–ಎಂಟ್ರಿ ಪಡೆದಿರುವ ಹಿನ್ನೆಲೆಯಲ್ಲಿ ಜಗಳ ಆದರೂ ಆಗಬಹುದು ಎಂದು ಟೀವಿ ಜ್ಯೋತಿಷಿಗಳು ಭವಿಷ್ಯ ನುಡಿದಿದ್ದಾರಂತೆ.

# ಲೋ ಜಡ್ಜ್!

ಹಾಲಿವುಡ್ ಸುಂದರಿ 'ಜೆ ಲೋ' ಖದರು ಇನ್ನೂ ಕಡಿಮೆಯಾಗಿಲ್ಲ. ಟಿವಿ ಹಾಗೂ ಸಿನಿಮಾಗಳ ಈ ನಾಯಕಿ– ಗಾಯಕಿ ಇದೀಗ ಕಿರುತೆರೆಯಲ್ಲಿ ರಿಯಾಲಿಟಿ ಷೋ ಒಂದಕ್ಕೆ ಜಡ್ಜ್ ಆಗಿದ್ದಾಳೆ. ಗಂಡ ಮಾರ್ಕ್ ಆ್ಯಂಟನಿ ಜತೆಗೆ ಜೆನಿಫರ್ ಲೋ ಳದ್ದು ಸುಖ ಸಂಸಾರ. ಹಾಗೆಂದೇ ಆಕೆಗೀಗ ಸಿನಿಮಾಗಳಲ್ಲಿ ಆಸಕ್ತಿ ಕಡಿಮೆಯಾಗಿದೆಯಂತೆ. 'ಸಿನಿಮಾ ಅವಕಾಶಗಳಿಲ್ಲ ಎಂದಲ್ಲ. ನನಗೇ ಆಸಕ್ತಿ ಇಲ್ಲ. ಒತ್ತಾಯಕ್ಕೆ ಕಟ್ಟುಬಿದ್ದು ಜಡ್ಜ್ ಆಗಿದ್ದೇನೆ. ಹಾಗೆಂದು ತೀರ್ಪು ನೀಡುವಾಗ ಒತ್ತಾಯಕ್ಕೆ ಕಟ್ಟು ಬೀಳುವುದಿಲ್ಲ' ಎಂದು ಜೆ ಲೋ ಸಣ್ಣಗೆ ಗುಡುಗಿದ್ದಾಳೆ. ನ್ಯಾಯದ ಬಗ್ಗೆ ಜೆ ಲೋ ಎಷ್ಟೊಂದು ಕಟ್ಟುನಿಟ್ಟಾಗಿದ್ದಾಳೆ ಎಂದು ಅಂದುಕೊಳ್ಳುವ ಮುನ್ನ ಇನ್ನೊಂದು ಸುದ್ದಿ ಓದಿ ಬಿಡಿ– ಜೆ ಲೋ ಕಳೆದ ಆರು ವರ್ಷಗಳಿಂದ ತನ್ನ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿದ್ದ ನ್ಯಾನ್ಸಿ ರೈಡರ್‌ಳನ್ನು ಮೊನ್ನೆ ಏಕಾಏಕಿ ಕೆಲಸದಿಂದ ವಜಾ ಮಾಡಿದ್ದಾಳಂತೆ! 'ಷೋ ಕಾಸ್' ಎಂದು ಕೇಳಿದರೆ, 'ನೋ ಕಾಸ್' ಎಂದಳಂತೆ! ಅಮೆರಿಕದ ಅತ್ಯಂತ ಶ್ರೀಮಂತ ನಟಿಯಾಗಿರುವ ಜೆನ್ನಿಫರ್ ಲೋಪೆಜ್ ಜಡ್ಜ್ ಆಗಿರುವ ಷೋನಲ್ಲಿ ಭಾಗವಹಿಸುವವರನ್ನು ದೇವರೇ ಕಾಪಾಡಬೇಕು!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65